ಎನ್‌ಜಿಒ ಶಾಮಸುಂದರ ಇದ್ದಕ್ಕಿದ್ದಂತೆ ಬಂದು ಎಚ್ಚರಿಕೆ ಕೊಟ್ಟದ್ದು ನೆನಪಿಗೆ ಬಂತು. ಆ ಸಂಗತಿ ಮತ್ತು ಎಂಜಿನಿಯರೊಬ್ಬ ತಾನಾಗೆ ಬಂದು ಸಲಹೆ ನೀಡಿದ್ದನ್ನು ಬಿಚ್ಚಿಟ್ಟ ಆನಂದ.

'ಅದು ಬಿಕಾನೇರಿಯ ತಂತ್ರಗಾರಿಕೆಗೆ ಸಾಕ್ಷಿ! ಒಂದುಕಡೆ ನಮ್ಮ ಮನಸು ಅಸ್ಥಿರವಾಗಿ, ಸಾಕು ಕರಕರೆ ಅನಿಸುವಂತೆ ಮಾಡೋದು. ಆಮೇಲೆ ಹಿತೈಶಿಯಂತೆ ರಂಗಕ್ಕೆ ಇಳಿಯೋದು. ಈ ಪುರಾತನ, ಈಗ ಮತ್ತೆಲ್ಲೂ ನೋಡಸಿಗದ ಅನನ್ಯ ವಾಸ್ತುವಿನ ಕಟ್ಟಡ, ಶ್ರೀಮಂತ ಯಾತ್ರಿಗಳನ್ನು ಹುಚ್ಚರನ್ನಾಗಿ ಮಾಡಿಬಿಡತ್ತೆ. ಜನದಟ್ಟಣೆಯಿಂದ ದೂರ. ಸಮೀಪದಲ್ಲಿ ಹರಿಯೋ ಹೊಳೆ, ಮರಗಿಡ, ದೂರದವರೆಗು ಗದ್ದೆಗಳು. ಸುತ್ತಮುತ್ತ ತಾಸೆರಡುತಾಸಿನ ಪ್ರಯಾಣದಲ್ಲಿ ನೋಡಬಹುದಾದ ಅನೇಕ ಪ್ರೇಕ್ಷಣೀಯ ಸ್ಥಳಗಳು. ಸಾವಿರ ವರ್ಷ ಹಿಂದಿನ ಕಾಲವೊಂದರಲ್ಲಿ ವಾಸಿಸುವ ಅನುಭವಕ್ಕೆ ಮುಗಿಬಿದ್ದು ಓಡಿಬರತಾರೆ ಹಣವಂತ ಯಾತ್ರಿಗಳು! ಇದನ್ನೆಲ್ಲಾ ಹೀಗೇ ಉಳಿಸಿಕೊಂಡು ಪಂಚತಾರಾ ಹೋಟೆಲು ಮಾಡತಾನೆ ಬಿಕಾನೇರಿ. ಈಗಿರುವ ಸೊರಬದ ದಾರಿ, ರಾಜ್ಯ ಹೆದ್ದಾರಿಯಾಗೋ ವದಂತಿಯಿದೆ. ಹಣದ ಹೊಳೆ ಹರಿದುಬಿಡುತ್ತದೆ ಅವನ ಅಕೌಂಟಿಗೆ!'

'ಅದೆಲ್ಲಾ ನಾವು ಕೊಟ್ಟ ನಂತರದ ಮಾತು! ಇಷ್ಟು ಗೊತ್ತಾದ ಮೇಲೂ ನಾವು ಕೊಡತೇವ ಚುಕ್ಕಿ?' ಸವಾಲಿನ ದನಿಯಲ್ಲಿ ಹೇಳಿದ ಆನಂದ.

'ಬಿಕಾನೇರಿ ಮನಸು ಮಾಡಿದ ಅಂದರೆ ತಗೊಂಡ ಅಂತಲೆ ಲೆಕ್ಕ. ಇಲ್ಲೀ ವರೆಗೆ ಯಾವುದೂ ಆಗದೆ ಉಳಿದಿಲ್ಲ ಅಂತ ನಂಗೆ ಸಿಕ್ಕ ಮಾಹಿತಿ. ಅವನ ಹತ್ತಿರ ಹೋಟೆಲಿನ ಪೂರ್ಣ ನಕ್ಷೆ ತಯಾರಿದೆ. ಕಟ್ಟಡದೊಳಭಾಗದ ವಿವರವಾದ ಫೋಟೊಗಳನ್ನು ನಿಮ್ಮವರೆ ಯಾರೋ ಕೊಟ್ಟಿರುವ ಸಾಧ್ಯತೆಯಿದೆ.' ಹೋದ ನವರಾತ್ರಿಗೆ ಬಂದಾಗ, ದೊಡ್ಡಪ್ಪ ಮೆತ್ತಿಮೇಲೆ ಕೆಳಗೆ ಎಲ್ಲಾ ಮೊಬೈಲಿನಲ್ಲಿ ಫೋಟೊ ತೆಗೆಯುತ್ತಿದ್ದುದು ನೆನಪಿಗೆ ಬಂತು. 'ಒಳಗೆ ಕೋಣೆಗಳು ಹೇಗಿರಬೇಕು, ಪೀಠೋಪಕರಣಗಳು ಹೇಗಿರಬೇಕು ಎಲ್ಲಾ ನಿರ್ಧರಿಸಿಯಾಗಿದೆ ನಂಗೆ ಸಿಕ್ಕ ಮಾಹಿತಿ ಪ್ರಕಾರ. ನೀವ್ಯಾರು ನಂಬಲ್ಲ, ಹೋಟೆಲಿಗೆ ಹೆಸರನ್ನೂ ಆಯ್ಕೆ ಮಾಡಿಯಾಗಿದೆ! 'ದೇಶಾಮಾತ್ಯ', 'ಮೃತ್ತಿಕಾ ನಿವಾಸ' ಇತ್ಯಾದಿ ಇತ್ಯಾದಿ' ನಿಲ್ಲಿಸಿದಳು ಚುಕ್ಕಿ.

ಅಲ್ಲಿ ವಿಲಕ್ಷಣ ಶಾಂತಿ ನೆಲೆಸಿತು. ಪರಿಸ್ಥಿತಿಯ ಗಂಭೀರತೆಯ ಚಿಂತೆಯಲ್ಲಿ, ದೇಶ್ವಂತರ ಮುಖದಲ್ಲಿ ತಳಮಳವಿತ್ತು. ಆನಂದ, ಮುಂದೇನು ಮಾಡಬೇಕು ಅನ್ನುವ ಒತ್ತಡದಲ್ಲಿದ್ದ.

'ಚಿಂತೆ ಮಾಡಬೇಡಿ. ವಸ್ತುನಿಷ್ಠವಾಗಿ ನೋಡಿ. ನಂಗೊತ್ತಿದ್ದಂತೆ, ಬಿಕಾನೇರಿ ಕೊಲೆ, ಬೆದರಿಕೆಯಂತಹ ಹಿಂಸೆಯ ಮಾರ್ಗದಿಂದ ದೂರ. ಅವನದೇನಿದ್ದರೂ ಮಾನಸಿಕ ದಾಳಿ. ಹಣವೆ ಅಸ್ತ್ರ. ಈ ಕಟ್ಟಡಕ್ಕೆ ಆರೇಳು ಕೋಟಿ ವರೆಗು ಅವಶ್ಯಕವಾದರೆ ಕೊಡಬಹುದೇನೋ!' ಆನಂದ ಚಿಂತಾಗ್ರಸ್ತನಾಗಿ ಕುಳಿತಿದ್ದು ಕಂಡವಳು 'ಏ ಆನಂದ, ಗೆಳೆಯರಾಗಿ ನಾವೆಲ್ಲಾ ನಿನ್ನ ಜೊತೆ ಇದೀವೋ. ಹಾಗೇಕೆ ಭಯ ಪಡತಿದೀಯ? ನೀನ್ಯಾವ ನಿರ್ಣಯ ತಗೊಂಡ್ರು ನಮ್ಮ ಕೈಲಾಗೋ ಸಹಾಯ ಮಾಡತೀವಿ' ಅವಳ ಧ್ವನಿಯಲ್ಲಿ ಭರವಸೆಯಿತ್ತು.

ಮರುದಿನ ಚುಕ್ಕಿ ಮತ್ತು ಪಾಟೀಲ ಮರಳಿ ಹೋದರು. ಮನೆಯಲ್ಲಿದ್ದವರ ತಲೆಯಲ್ಲಿ, ನಿಂತಲ್ಲಿ ಕುಳಿತಲ್ಲಿ ಇದೇ ವಿಷಯ ಕೊರೆಯುತ್ತಿತ್ತು. ಚಂದನಿಕಾಳನ್ನು, ಅವಳಾಗಿ ಬಿಟ್ಟರು ಯುನಿಟ್ಟಿನವರು ಬಿಡದೆ ಒತ್ತಾಯಿಸಿದ್ದಕ್ಕೆ, ಪೇಪರಿನಲ್ಲಿ ಸುದ್ದಿ ವರದಿಯಾಗಿದ್ದಕ್ಕೆ, ಯಾರೋ ಕಂಗ್ರಾಚ್ಯುಲೇಶನ್ ಹೇಳಿದ್ದಕ್ಕೆ ಹೀಗೆ ಒಂದಕ್ಕೊಂದು ಕಾರ್ಯಕಾರಣ ಸಂಬಂಧ ಜೋಡಿಸಿಕೊಂಡು ಹೋಗುತ್ತಿತ್ತು.

***

ಇದಾದ ಮೇಲೆ, ದೇಶ್ವಂತರು ಅಂತರ್ಮುಖಿಯಾಗಿರುವುದು ಜಾಸ್ತಿಯಾಯಿತು. ಪುಸ್ತಕ ಓದುತ್ತಿರುವಾಗ, ಇದ್ದಕ್ಕಿದ್ದಂತೆ ಯಾವುದನ್ನೊ ಗಾಢವಾಗಿ ಚಿಂತಿಸುತ್ತಾ ಕುಳಿತುಬಿಡುತ್ತಿದ್ದರು. ಕೊರಗಿನಿಂದ ಆರೋಗ್ಯ ಕೆಡಬಹುದು ಅಂತ ಆನಂದನ ಭಯವಾಗಿತ್ತು. 'ಮಗು, ಹೆಚ್ಚೆಂದರೆ ಅವರೇನು ಮಾಡಬಹುದು? ಹಣದ ಆಮಿಷ ತೋರಿಸಬಹುದು. ಈಗಂತು, ಅವರಿಗೇನು ಬೇಕು ಅಂತ ನಮಗೆ ಗೊತ್ತಾಗಿದೆ. ಸುತರಾಂ ನಾವು ಮಾರುವುದಿಲ್ಲ ಅಂತ ಹೇಳಿದರೆ ಏನು ಮಾಡತಾರೊ ನೋಡುವ' ಅಂದರು. ಅಜ್ಜನೇ ಅಷ್ಟು ಗಟ್ಟಿ ಮಾತಾಡಿದಾಗ ಆನಂದನಿಗೂ ದ್ವಿಗುಣ ಧೈರ್ಯ ಬಂತು.

ಭಾನುವಾರ, ಅಪರೂಪಕ್ಕೆ ದೇಶ್ವಂತರು ಆನಂದನೊಂದಿಗೆ ಹಜಾರದಲ್ಲಿ ಕುಳಿತು, ಟೀವಿಯಲ್ಲಿ ಶಾಸ್ತ್ರೀಯ ಸಂಗೀತ ವೀಕ್ಷಿಸುತ್ತಿದ್ದರು. ಫೋನು ಕರೆ ಬಂತು. ಇಂಗ್ಲೆಂಡಿಂದ ಹಿರಿಯಮಗ ವಾಮನ ಮಾತಾಡುತ್ತಿದ್ದ. ಅವನು ಮಾತಾಡುವುದು ತಿಂಗಳಿಗೊ ಎರಡು ತಿಂಗಳಿಗೊ ಒಮ್ಮೆಯಾಗಿತ್ತು. ಹೀಗಾಗಿ ಬಕುಲಾ ಸಹ ಗಂಡನದ್ದಾದ ಮೇಲೆ ತಾನು ಮಾತಾಡಬೇಕೆಂದು ಪಕ್ಕಕ್ಕೆ ಬಂದು ನಿಂತರು. ವಾಮನ, ಇಲ್ಲಿಯವರ ಕುಶಲ ವಿಚಾರಿಸಿದವ ವಿಷಯಕ್ಕೆ ಬಂದಿದ್ದ. ದೇಶ್ವಂತರ ಮುಖದಲ್ಲಾಗುವ ಬದಲಾವಣೆ ನೋಡಿದ ಆನಂದ, ಏನೋ ಸರಿಯಿಲ್ಲ ಅಂತ ತರ್ಕಿಸಿದ. 'ಅಲ್ಲವೋ, ಇಲ್ಲಿಯದೇನೂ ಬೇಡ ಅಂತ ನೀನೆ ಅಂದಿದ್ದೆಯಲ್ಲೋ...' ದೇಶ್ವಂತರು ಅಸಹನೆಯ ಸ್ವರದಲ್ಲಿ ಆಕ್ಷೇಪಿಸಿದರು. ಆ ಕಡೆಯಿಂದ ಅವನೇನು ಹೇಳುತ್ತಿದ್ದನೊ ಗೊತ್ತಾಗುತ್ತಿರಲಿಲ್ಲ. ಮೌನವಾಗಿ ಕೇಳುತ್ತಿದ್ದು , ಐದು ನಿಮಿಷದ ನಂತರ ಫೋನಿಟ್ಟರು. ಬಕುಲಾಗೆ 'ನೀನು ಮಾತಾಡಲು ಬಂದೆ, ನಂಗೊತ್ತು. ಆದರೆ ಅವನೇ ಫೋನಿಟ್ಟ' ಉತ್ತರಿಸಿದವರು ಸೋಫಾದ ಮೇಲೆ ಮಾತಿಲ್ಲದೆ ಕುಳಿತರು. ಆಮೇಲಂದರು: 'ವಾಮನನಿಗೂ ಈ ಮನೆಯಲ್ಲಿ ಪಾಲು ಬೇಕಂತೆ.' ಆಘಾತವಾಯಿತು ಅಲ್ಲಿದ್ದವರಿಗೆ. ಆನಂದ ಹೇಳಿದ: 'ಮುಂದಿನ ದಾಳ ನಡೆಸಿದಾರೆ...'

ನಾಕು ದಿವಸದ ನಂತರ ಪಾಂಡುರಂಗ ಅನಿರೀಕ್ಷಿತವಾಗಿ ಬಂದಿಳಿದ. ಸಂತೋಷವಾಗುವ ಬದಲು ಎಲ್ಲಾ ಆತಂಕಕ್ಕೊಳಗಾದರು. ಬಂದವ ಅರ್ಧಗಂಟೆಯಲ್ಲಿ ವಿಷಯ ಮಂಡಿಸಿದ್ದ. ಹಿರಿಯರೆಲ್ಲಾ ಈ ಕಟ್ಟಡದ ಜೊತೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದಾರೆ. ಹೀಗಾಗಿ ಅದನ್ನು ಕೆಡವುವ ವಿಚಾರವನ್ನು ಈಗ, ತಾವೂ ಕೈಬಿಟ್ಟಿದ್ದಾಗಿ ಹೇಳಿದ. ಇದನ್ನು ಖರೀದಿಸುವ ವಿಚಾರದಲ್ಲಿ ಪ್ರಸಿದ್ಧ ಕಂಪನಿಯೊಂದು ಮಾತಾಡಿದ ವಿಚಾರವನ್ನು ಮಕ್ಕಳಿಂದ ಮುಚ್ಚಿಟ್ಟ ಬಗ್ಗೆ ಬೇಸರ ಬಹಿರಂಗಪಡಿಸಿದ. ಮಾರುವ ವಿಚಾರವನ್ನೇ ಯಾರೂ ಮಾಡಿರದಾಗ, ಮುಚ್ಚಿಡುವ ಪ್ರಶ್ನೆಯೆಲ್ಲಿ ಬಂತು ಅಂತ ಇವರು ಕೊಟ್ಟ ವಿವರಣೆಯಿಂದ ಅವನಿಗೆ ಸಮಾಧಾನವಾಗಲಿಲ್ಲ. ತಾವು ಈ ಮನೆ ಮಕ್ಕಳಲ್ಲವೆ? ಇಂತಹ ಗಹನ ವಿಚಾರವನ್ನು ತಮ್ಮೊಡನೆ ಸಮಾಲೋಚಿಸಿ ನಿರ್ಣಯಕ್ಕೆ ಬರಬೇಕಲ್ಲವೇ? ಅನ್ನುವುದು ಅವನ ವಾದ. ಉಳಿದ ಆಸ್ತಿಯಲ್ಲಿ ತಮಗೇನು ಆಸಕಿಯಿಲ್ಲ, ಆದರೆ ಈ ಕಟ್ಟಡವನ್ನು ಕೊಳ್ಳಲು ಬಂದರೆ ಮಾರಲಿಕ್ಕೇನು ತೊಡಕು? ಅಂತ ಕೇಳಿದ. ಅವರು ಆರೇಳು ಕೋಟಿ ಕೊಡಲು ಸಿದ್ಧವಿರೋ ಹಾಗಿದೆಯಂತೆ. ಅಂಥದ್ದನ್ನು ಬಿಡೋದು ದಡ್ಡತನ. ತನಗೂ ಈಗ ಹಣದ ತುರ್ತಿದೆ. ನಾಲ್ಕು ಪಾಲಂದರೂ ದೊಡ್ಡಮೊತ್ತ ಸಿಗುತ್ತದೆ ಅಂದ. ಅವನ ರೀತಿಯಲ್ಲಿ ಗಟ್ಟಿ ಹಟವೊಂದು ಕಾಣುತ್ತಿತ್ತು. 'ಅವರು ಪ್ರಸ್ತಾಪಿಸಿದ್ದು ಪಾಲುದಾರಿಕೆಗೆ. ಹೋಟೆಲು ಮಾಡತಾರೆ ಇದನ್ನ!...' ಅರ್ಥ ಮಾಡಿಸಲು ಯತ್ನಿಸಿದರು. 'ಅಪ್ಪಾ, ನಮಗೂ ಎಲ್ಲಾ ವಿವರ ಸಿಕ್ಕಿದೆ. ಖರೀದಿಸೊ ಪ್ರಸ್ತಾಪಾನೂ ಇದೆ ಅದರಲ್ಲಿ. ಹೋಟೆಲಾದರೆ ಹೋಟೆಲು, ಮಾಡಿಕೊಳ್ಳಲಿ ಬಿಡಿ' ಅಂದ. ಎಲ್ಲರೂ ಮೌನವಾಗಿದ್ದು ಕಂಡು 'ನೋಡೀ, ನಮಗೂ ಹಕ್ಕಿದೆ ಇದರಲ್ಲಿ ಒಪ್ಪುತೀರಾ? ಅಂದಮೇಲೆ, ನಿರ್ಧಾರ ನಮ್ಮನ್ನೂ ಸೇರಿಸಿಕೊಂಡು ತೆಗೆದುಕೊಳ್ಳಿ ಅಂತ ನಾವು ಹೇಳುವುದು. ನಮಗೆಲ್ಲಾ ಈ ಕಟ್ಟಡದಲ್ಲಿ ಪಾಲು ಬೇಕು. ಇದು ಶಾಂತಾರಾಮ, ನಾನು ಮತ್ತೆ ವಾಮನಣ್ಣ



ಕೋಣ ನೀರಿಗಿಳಿಯಿತು
ಪಕ್ಷಿಗಳು
ಬೆನ್ನಿನ ಮಂಚದ ಮೇಲೆ
ಮಲಗಿ ನಿದ್ದೆ ಮಾಡಿದವು

***

ಮಿಂಚು ಹೊಳೆಯಿತು
ಮೋಡಗಳ ನಡುವೆ
ಕವಿಯೊಬ್ಬನಿದ್ದಾನೆಂದು ತಿಳಿಯಿತು

–ಜರಗನಹಳ್ಳಿ ಶಿವಶಂಕರ್